## ಕಂಬಳಿಹುಳು

ಹದಿನೈದು ದಿನಗಳಿಂದ ನಮ್ಮ ಪ್ರದೇಶದ ಎಲ್ಲಾ ಮನೆಗಳಲ್ಲಿ ಕಂಬಳಿಹುಳಗಳು ಕಾಣಿಸಿಕೊಳ್ಳುತ್ತಿದ್ದವು. ಮರದಿಂದ ಉದುರಿದ್ದ ಎಲೆಗಳಿಂದ ಅವುಗಳನ್ನು ತೆಗೆದು ಕಂಪೌಂಡ್ ಆಚೆಗೆ ಎಸೆಯುತ್ತಿದ್ದೆವು. ಪಕ್ಕದ ಮನೆಯ ಎರಡು ವರ್ಷದ ಪೋರ ವಜ್ರಾಂಶು ಸಹ ತಮ್ಮ ಕಂಪೌಂಡ್‌ನಲ್ಲಿನ ಹುಳಗಳನ್ನು ಹುಡುಕಿ ಅವರಜ್ಜನಿಂದ ಅವನ್ನು ಬಿಡದೆ ತೆಗೆಸಿಹಾಕುತ್ತಿದ್ದ. ಒಂದಿನ ತನ್ನ ಪುಸ್ತಕ ಒಂದನ್ನು ತಂದು ತೋರಿಸುತ್ತಿದ್ದ. ಚೆಂಡು (ಆಡುವುದು), ಗಿಟಾರ್ (ನುಡಿಸುವುದು) ಎಂದೆಲ್ಲ ಹೇಳಿದವನು ಒಂದು ಕಡೆ ಎಲೆಗಳ ಚಿತ್ರ ಕಂಡೊಡನೆ, 'ಎಲೆ–ಕಂಬಳಿಹುಳ ತೆಗೆದು ಹಾಕುವುದು' ಎಂದ. ಎಲೆಯ ಕೆಲಸವೇ ಅದು ಎಂಬಂತೆ ಅವನು ಹೇಳಿದ ರೀತಿಗೆ ನಮಗೆಲ್ಲಾ ನಗು ಬಂತು.

**ತಲಕಾಡು ಶ್ರೀನಿಧಿ**





## ಮಗನ ಕನಸು

ನನ್ನ ಮಗ ತೇಜಸ್ ತನಗೆ ಬಿದ್ದ ಕನಸುಗಳನ್ನೆಲ್ಲ ನೆನಪಿಟ್ಟುಕೊಂಡು ಮುಂಜಾನೆದ್ದು ಅವುಗಳನ್ನು ಚಾಚೂತಪ್ಪದೆ ಹೇಳಿಬಿಡುತ್ತಾನೆ. ಒಮ್ಮೆ ಹಾಗೆಯೆ ನನ್ನ ಮುಂದೆ ತನ್ನ ಕನಸನ್ನು ಬಿಚ್ಚಿಡುತ್ತ, 'ಅಮ್ಮ, ಇವತ್ತು ನನ್ನ ಕನಸಲ್ಲಿ ನೀನು, ಅಪ್ಪ, ಅಂಜು ಚಿಕ್ಕಮ್ಮ ಎಲ್ಲರೂ ಬಂದಿದ್ರಿ. ನೀನಂತೂ ಎಷ್ಟು ಸ್ಲಿಮ್ ಆಗಿ ಕಾಣಿಸ್ತಾ ಇದ್ದೆ ಗೊತ್ತಾ' ಎಂದ.
'ಹೌದೇನೋ ತೇಜು! ಛೆ, ಒಂದು ಫೋಟೊ ತೆಗೀಬಾರ್ದ?' ಎಂದಾಗ ಆತ, 'ಅಮ್ಮ, ಇವತ್ತು ಅದರ ಪಾರ್ಟ್–2 ಬಿದ್ದೇ ಬೀಳುತ್ತೆ, ಗ್ಯಾರಂಟಿ ಫೋಟೊ ತೆಗಿತಿನಿ' ಎಂದ. ನಾನು ಈಗಲೂ ಆ ಕನಸಿನ ಎರಡನೇ ಕಂತಿಗಾಗಿ ಕಾಯುತ್ತ ಇದ್ದೇನೆ!

**ಆರತಿ ಘಟಿಕಾರ್**